156 ಪ್ರ 2-7-22 (102) 4KK 0308

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಎಸ್. ರವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಉತ್ತರ**

*****

**ವಿಷಯ**:

ರಾಜ್ಯದಲ್ಲಿ ಕೈಗಾರಿಕಾ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಂಡ ಜಮೀನುಗಳನ್ನು 10-12 ವರ್ಷಗಳು ಕಳೆದರೂ ಸಹ ಕೈಗಾರಿಕೆಗಳಿಗೆ ಹಂಚಿಕೆ ಮಾಡದ ಕಾರಣ ಜಮೀನು ಕಳೆದುಕೊಂಡವರಿಗೆ ಅಥವಾ ಅವರ ಅವಲಂಬಿತರಿಗೆ ಉದ್ಯೋಗ ದೊರಕದೆ ತೊಂದರೆಯಾಗುತ್ತಿರುತ್ತದೆ. ಈ ರೀತಿ ವಿಳಂಬ ಪ್ರಕರಣಗಳಲ್ಲಿ ಜಮೀನು ಕಳೆದುಕೊಂಡವರಿಗೆ ಪರ್ಯಾಯವಾಗಿ ಉದ್ಯೋಗ ನೀಡಲು ಯಾವುದೇ ಕ್ರಮ ಆಗುತ್ತಿಲ್ಲ. ಇದರಿಂದ ಜಮೀನು ಕಳೆದುಕೊಂಡವರು ಜೀವನೋಪಾಯಕ್ಕೆ ತೊಂದರೆ ಅನುಭವಿಸುತ್ತಿದ್ದು, ಪರ್ಯಾಯವಾಗಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ**:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರಾಜ್ಯಾದ್ಯಂತ ಜಮೀನು ಭೂಸ್ವಾಧೀನಪಡಿಸುತ್ತಿರುತ್ತದೆ. ಮಂಡಳಿಯು ಭೂಸ್ವಾಧೀನಪಡಿಸಿದ ಜಮೀನಿಗೆ ಕೆಲವು ಸಂದರ್ಭದಲ್ಲಿ ಭೂಮಾಲೀಕರು ಹೆಚ್ಚುವರಿ ಭೂಪರಿಹಾರದ ಸಂಬಂಧ ಹಾಗೂ ಇತರೆ ಕಾರಣಗಳಿಂದ ಹೂಡುವ ವ್ಯಾಜ್ಯ ಇತ್ಯಾದಿ ಸಮಸ್ಯೆಗಳಿಂದ ಮಂಡಳಿಗೆ ಜಮೀನು ಹಸ್ತಾಂತರವಾಗಲು ವಿಳಂಬವಾಗಿ ಕೈಗಾರಿಕಾ ಪ್ರದೇಶಗಳನ್ನು ನಿಗದಿತ ಸಮಯದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗದೇ, ಅಂತಹ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೆಗಳಿಗೆ ಜಮೀನು ಹಂಚಿಕೆ ಮಾಡಲು ವಿಳಂಬವಾಗುತ್ತದೆ.

ಇನ್ನೂ ಕೆಲವು ಸಂದರ್ಭದಲ್ಲಿ ನಿವೇಶನ ಹಂಚಿಕೆಯಾದ ಮೇಲೂ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಹೂಡುವ ವ್ಯಾಜ್ಯಗಳು ಇತ್ಯಾದಿ ಸಮಸ್ಯೆಗಳಿಂದ ಹಂಚಿಕೆದಾರರು ಯೋಜನೆ ಅನುಷ್ಠಾನಗೊಳಿಸಲು ವಿಳಂಬವಾಗಿರುತ್ತದೆ.

ಮುಂದುವರೆದು, ಈಗಾಗಲೇ ಹಂಚಿಕೆ ಪಡೆದಿರುವ ಉದ್ದಿಮೆದಾರರೊಂದಿಗೆ ಮಂಡಳಿಯು ನೆರವೇರಿಸುತ್ತಿರುವ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರದಲ್ಲಿ ಸರ್ಕಾರದ ಕೈಗಾರಿಕಾ ನೀತಿ ಅನುಸಾರ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಷರತ್ತನ್ನು ವಿಧಿಸಲಾಗುತ್ತಿದೆ. ಅಲ್ಲದೇ, ಜಮೀನು ಕಳೆದುಕೊಂಡ ಕುಟುಂಬದ ಕನಿಷ್ಟ ಒಬ್ಬ ಸದಸ್ಯನಿಗೆ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಷರತ್ತನ್ನು ಸಹ ವಿಧಿಸಲಾಗುತ್ತದೆ.

ಈ ರೀತಿ ಭೂಸ್ವಾಧೀನಪಡಿಸಿದ ಜಮೀನಿಗೆ ವ್ಯಾಜ್ಯ, ತಕರಾರು, ಹೆಚ್ಚುವರಿ ಭೂಪರಿಹಾರಗಳಿಗೆ ಸಂಬಂಧಿಸಿದಂತೆ ಇರುವ ಸಮಸ್ಯೆಗಳನ್ನು ಆದಷ್ಟು ಶೀಘ್ರ ಬಗೆಹರಿಸಿ, ಮಂಡಳಿಗೆ ಹಸ್ತಾಂತರ ಪಡೆದು ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ತಕರಾರು ರಹಿತ ಜಮೀನನ್ನು ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕ್ರಮವಹಿಸಿ, ಉದ್ದಿಮೆದಾರರು ನಿಗದಿತ ವೇಳೆಯೊಳಗೆ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ಕೈಗಾರಿಕೆಗಳಲ್ಲಿ ಭೂಮಾಲೀಕರಿಗೆ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಅನುವು ಮಾಡಿಕೊಡಲಾಗುತ್ತದೆ.

**ಕಡತ ಸಂಖ್ಯೆ: ಸಿಐ 479 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು